

# ನಿಗೂಢ ಲಾಟೂ ದೇವಾಲಯ

■ ಜಿ. ನಾಗೇಂದ್ರ ಕಾವೂರು

ಉತ್ತರಾಖಂಡದ ಚಮೋಲಿ ಜಿಲ್ಲೆಯ ಲಾಟೂ ದೇವತಾ ದೇವಸ್ಥಾನದಲ್ಲಿ ದೇವರ ಮೂರ್ತಿಯಿಲ್ಲ. ಆದರೂ ಭಕ್ತರು ಅಲ್ಲಿ ಪೂಜೆ ಸಲ್ಲಿಸುತ್ತಾರೆ.

ನೈಸರ್ಗಿಕ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ವಾಣ್ ಗ್ರಾಮ – ದಟ್ಟ ಕಾಡು, ಹಚ್ಚ ಹಸುರಿನ ಹುಲ್ಲುಗಾವಲುಗಳು ಮತ್ತು ಹಿಮಚ್ಛಾದಿತ ಪರ್ವತಗಳಿಂದ ಆವೃತವಾಗಿದೆ. ಧಾರ್ಮಿಕ ಹಾಗೂ ನಿಸರ್ಗ ಪ್ರೇಮಿಗಳ ನೆಚ್ಚಿನ ತಾಣವಿದು. 300 ಕುಟುಂಬಗಳು ವಾಸವಾಗಿರುವ ಗ್ರಾಮ ಸಮುದ್ರಮಟ್ಟದಿಂದ 8000 ಅಡಿ ಎತ್ತರದಲ್ಲಿದೆ. ಲಾಟೂ ದೇವಸ್ಥಾನ ಊರಿನ ವಿಶೇಷಗಳಲ್ಲೊಂದು.

ಈ ದೇಗುಲದಲ್ಲಿ ದೇವರ ಮೂರ್ತಿಯಿಲ್ಲ. ದೇವರ ಮೂರ್ತಿ ಇಲ್ಲದಿದ್ದರೂ, ನಾಗಮಣಿ ಹೊಂದಿರುವ ನಾಗರಾಜ ಇಲ್ಲಿ ವಾಸವಾಗಿದ್ದಾನೆಂಬ ನಂಬಿಕೆ ಜನರದ್ದು. ಆ ಕಾರಣಕ್ಕೇ ಇಲ್ಲಿ ಪೂಜೆ ನಡೆಸಲಾಗುತ್ತದೆ. ನಾಗಮಣಿ ನೋಡಿದರೆ ಅದರ ಬೆಳಕಿನಿಂದ ದೃಷ್ಟಿ ಕಳೆದುಕೊಳ್ಳುತ್ತಾರೆಂಬ ನಂಬಿಕೆಯಿಂದ ಈ ದೇಗುಲದ ಪೂಜಾರಿ ತಮ್ಮ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು, ನಾಗರಾಜನ ವಿಷದ ವಾಸನೆ ತಮ್ಮ ಮೂಗಿಗೆ ತಗುಲದಂತೆ ಮೂಗಿಗೆ ಬಟ್ಟೆ ಕಟ್ಟಿಕೊಂಡು ಪೂಜೆ ಮಾಡುತ್ತಾರೆ.

ಭಕ್ತರು ದೇವರಿಗೆ ಹೂವು ಹಣ್ಣುಗಳನ್ನು ಸಮರ್ಪಿಸಿ, ದೇವಸ್ಥಾನದಿಂದ ಸುಮಾರು ಐವತ್ತು ಅಡಿಗಳಷ್ಟು ದೂರದಲ್ಲಿ ನಿಂತು ಪೂಜೆಯಲ್ಲಿ ಭಾಗವಹಿಸುತ್ತಾರೆ.

**ವರ್ಷದಲ್ಲಿ ಆರು ತಿಂಗಳು ತೆರೆದಿರುವ ಲಾಟೂ ದೇವಾಲಯವನ್ನು ಚಾರ್‌ಧಾಮ್ ಯಾತ್ರೆಯ ಪಟ್ಟಿಗೆ ಸೇರಿಸಿ 'ಪಂಚಧಾಮ್' ಯಾತ್ರೆಯನ್ನಾಗಿ ಮಾಡುವ ಪ್ರಸ್ತಾಪ ಇದೆ.**

ದೇವಸ್ಥಾನದ ಬಾಗಿಲನ್ನು ವರ್ಷಕ್ಕೊಮ್ಮೆ ತೆರೆಯಲಾಗುತ್ತದೆ. ವೈಶಾಖ ಮಾಸದ ಹುಣ್ಣಿಮೆಯಂದು ತೆರೆದ ದೇವಾಲಯದ ಬಾಗಿಲುಗಳನ್ನು ಸರಿಯಾಗಿ ಆರು ತಿಂಗಳ ನಂತರ ಮಾರ್ಗಶಿರ ಮಾಸದ ಅಮಾವಾಸ್ಯೆಯಂದು ಮುಚ್ಚಲಾಗುತ್ತದೆ. ಉತ್ತರಾಖಂಡದ ಪ್ರಧಾನ ದೇವತೆ ನಂದಾದೇವಿಯ ಸಹೋದರನೆಂದು ನಂಬಲಾದ ಲಾಟೂ ದೇವರಿಗೆ ವಾರ್ಷಿಕ ಜಾತ್ರೆಯೂ ನಡೆಯುತ್ತದೆ. ಶುದ್ಧ ಮನಸ್ಸಿನಿಂದ ಪ್ರಾರ್ಥಿಸಿದಲ್ಲಿ ಭಕ್ತರ ಇಷ್ಟಾರ್ಥಗಳು ಈಡೇರುತ್ತವೆಂದು ಇಲ್ಲಿನ ಜನರ ನಂಬಿಕೆ. ತಮ್ಮ ಇಷ್ಟಾರ್ಥಗಳು ನೆರವೇರಿದ ನಂತರ ದೇವಾಲಯದ ಆವರಣದಲ್ಲಿ ಗಂಟೆಗಳನ್ನು ತೂಗುಹಾಕುತ್ತಾರೆ. ಮುಗಿಲೆತ್ತರಕ್ಕೆ ಬೆಳೆದು ನಿಂತಿರುವ ಬೃಹತ್ ಗಾತ್ರದ ಪೈನ್ ಮತ್ತು ಓಕ್ ಮರಗಳ ನಡುವೆ ಇರುವ ಲಾಟೂ ದೇವಾಲಯ ಬೆಳಿಗ್ಗೆ 8ರಿಂದ ಸಂಜೆ 6ವರೆಗೆ ತೆರೆದಿರುತ್ತದೆ.



ವರ್ಷದಲ್ಲಿ ಆರು ತಿಂಗಳು ತೆರೆದಿರುವ ಲಾಟೂ ದೇವಾಲಯವನ್ನು, ಚಾರ್‌ಧಾಮ್ ಯಾತ್ರೆಯ ಪಟ್ಟಿಯಲ್ಲಿ ಸೇರಿಸಿ 'ಪಂಚಧಾಮ್' ಯಾತ್ರೆಯನ್ನಾಗಿ ಮಾಡುವ ಪ್ರಸ್ತಾಪ ಇದೆಯೆಂದು ಸ್ಥಳೀಯರು ಹೇಳುತ್ತಾರೆ.

ಋಷಿಕೇಶ್, ಹರಿದ್ವಾರ, ಡೆಹರಾಡೂನ್‌ಗಳಿಂದ ವಾಣ್ ಗ್ರಾಮಕ್ಕೆ ಸಾರ್ವಜನಿಕ ಸಾರಿಗೆ ಲಭ್ಯ. ಎರಡು ಅತ್ಯಂತ ಸುಂದರವಾದ ಆಲ್ಪೈನ್ ಹುಲ್ಲುಗಾವಲು (ಬುಗ್ಯಾಲ್)ಗಳಾದ ಅಲಿ ಮತ್ತು ಬೆಡ್ನಿ ಬುಗ್ಯಾಲ್ ಸೇರಿದಂತೆ ಹಲವಾರು ಚಾರಣಗಳ ಬೇಸ್ ಕ್ಯಾಂಪ್ ಆಗಿರುವ ಲೋಹಾಜಂಗ್‌ನಿಂದ ಕೇವಲ 15 ಕಿ.ಮೀ. ದೂರದಲ್ಲಿ ವಾಣ್ ಗ್ರಾಮವಿದೆ. ಪ್ರವಾಸಿಗರು/ಚಾರಣಿಗರು ಉಳಿದುಕೊಳ್ಳಲು ವಾಣ್ ಮತ್ತು ಲೋಹಾಜಂಗ್‌ನಲ್ಲಿ ವಸತಿ ಸೌಕರ್ಯವಿದೆ.

ಪ್ರತಿಕ್ರಿಯಿಸಿ: feedback@sudha.co.in